
ನೂರರ ನೆನಪಿಗೆ

# 'ಶ್ರೀ' ಪರಿಚಯ



ಬಿ. ಎಸ್. ತಲ್ವಾಡಿ

BMS
928.K
TAL

ಗ್ರಂಥಭಂಡಾರ
ಬೆಂಗಳೂರು-19

ರಿಸರ್ವ್ ಬ್ಯಾಂಕ್ ಕನ್ನಡ ಸಂಘ
ನೃಪತುಂಗ ರಸ್ತೆ, ಬೆಂಗಳೂರು

'SRI' PARICHAYA–A brief introduction to the life and works of Professor B. M. Srikantiah by Shri B. S. Talwadi, Published by Reserve Bank Kannada Sangha, Nrupathunga Road, Bangalore–560 002, Karnataka.

BmS
928.K
TAL

First Edition March 1984

ಹಕ್ಕುಗಳು : ಗ್ರಂಥಕರ್ತರವು

2562
ಗ್ರಂಥಭಂಡಾರ
21/9/19

ಬೆಲೆ : ಒಂದು ರೂಪಾಯಿ

eg 16253

ಮುದ್ರಕರು :

ನೇತ್ರಾ ಪ್ರಿಂಟರ್ಸ್,
6ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018.

# ‘ಶ್ರೀ’ ಪರಿಚಯ

ಏನು ಚೆಲುವಿನ ನಾಡು ! ಚೆಲುವು ಚೆಲ್ಲುವ ನಾಡು ! ಕನ್ನಡದ ನಾಡು !
ಏನು ಚಿನ್ನದ ನಾಡು ! ನಮ್ಮೊಲುಮೆಯಾ ನಾಡು ! ನಮ್ಮಿನಿಯ ನಾಡು !
ಕಾವೇರಿಯಿಂದಮಾ ಗೋದಾವರಿಯುವರೆಗೆ ಚಾಚಿರುವ ನಾಡು !

ಈ ನಾಡಿನುದ್ದಗಲಕ್ಕೂ ಸುತ್ತಿ ಕನ್ನಡದ ಬಾವುಟವನ್ನು ಏರಿಸಿ ಹೇರಿಸಿ ಕಣ್ಮರೆಯಾದ ಕನ್ನಡದ ಕಣ್ವ, ಕನ್ನಡ ನವೋದಯ ಸಾಹಿತ್ಯದ ನೇತಾರ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು ಕ್ರಿ. ಶ. ೧೮೮೪ರ ಜನವರಿ ಮೂರರಂದು ಮೈಲಾರಯ್ಯ ಮತ್ತು ಭಾಗೀರಥಮ್ಮ ದಂಪತಿಗಳಿಗೆ ಚೊಚ್ಚಲ ಮಗುವಾಗಿ ಜನಿಸಿದರು. ಶ್ರೀರಂಗಪಟ್ಟಣದಲ್ಲಿ ಓಂ ಕಾರ ಬರೆದು ಅಕ್ಷರಾಭ್ಯಾಸವನ್ನು ಪ್ರಾರಂಭಿಸಿ, ಮೈಸೂರಿನಲ್ಲಿ ಪ್ರೌಢಶಿಕ್ಷಣ ಮುಗಿಸಿ, ಬೆಂಗಳೂರಿನಲ್ಲಿ ಬಿ. ಎ. ಪದವೀಧರರಾದರು. ಮುಂದೆ ೧೯೦೩ರಲ್ಲಿ ಮದ್ರಾಸಿಗೆ ಉಚ್ಚ ಶಿಕ್ಷಣಕ್ಕಾಗಿ ತೆರಳಿದರು. ಅಲ್ಲಿ ಎಂ. ಎ. ಪದವಿಯ ಜೊತೆಗೆ ಬಿ. ಎಲ್. ಮುಗಿಸಿ ೧೯೦೯ರಲ್ಲಿ ಮೈಸೂರು ಮಹಾರಾಜ ಕಾಲೇಜಿಗೆ ಇಂಗ್ಲೀಷ್ ಮತ್ತು ಕನ್ನಡ ಅಧ್ಯಾಪಕರಾದರು. ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆದರು ; ಇಂಗ್ಲೀಷ್ ಪ್ರಾಧ್ಯಾಪಕರಾದರು ; ಕನ್ನಡದ ಗೌರವ ಪ್ರಾಧ್ಯಾಪಕರಾದರು. ಕನ್ನಡ ಭಾಷೆಗೆ, ಸಾಹಿತ್ಯಕ್ಕೆ, ಜನತೆಗೆ ಏನೆಲ್ಲಾ ಮಾಡಲು ಸಾಧ್ಯವೊ ಅಷ್ಟನ್ನೂ ನಿಷ್ಠೆಯಿಂದ ಮಾಡಿದ ಶ್ರೀಕಂಠಯ್ಯನವರು ಬಿ.ಎಂ.ಶ್ರೀ. ಆದರು ; ಕನ್ನಡಕ್ಕೆ “ಶ್ರೀ” ಆದರು.

‘ಶ್ರೀ’ಯವರು ಮದ್ರಾಸಿನಲ್ಲಿ ಸ್ನಾತಕೋತ್ತರ ಪದವಿಗಾಗಿ ಓದುತ್ತಿರುವಾಗ ಸಾಹಿತ್ಯದ ವಿಚಾರವಾಗಿ ಗೆಳೆಯರೊಡನೆ ಚರ್ಚಿಸಿದರು ; ಕನ್ನಡ ನಾಡು, ನುಡಿ ಮತ್ತು ಜನತೆಗೆ ತಮ್ಮನ್ನೇ ತಾವು ಮುಡಿಪಿಟ್ಟುಕೊಂಡರು. ಕನ್ನಡ, ಇಂಗ್ಲೀಷ್, ತಮಿಳು, ಹಿಂದಿ ಮತ್ತು ಗ್ರೀಕ್ ಭಾಷೆಗಳಲ್ಲಿ ಅವರು ಪರಿಣತಿ

ಹೊಂದಿದ್ದರು. ತಮಿಳು ಭಾಷೆಯ ವಿದ್ವತ್ತು, ಇಂಗ್ಲೀಷ್ ಭಾಷೆಯ ಮೇಲಿದ್ದ ಹಿಡಿತ, ಕನ್ನಡದ ಮೇಲಿದ್ದ ಪರಿಶ್ರಮ-ಇವು ಮಾನಸಿಕವಾಗಿ ಅತ್ತ ಗರಿಕೆದರಿ ಕುಣಿವ ಕಾಲ ಪಕ್ವವಾಗುತ್ತಿದ್ದಂತೆ ಇತ್ತ ಅವರ ವೈಯಕ್ತಿಕ ಜೀವನದಲ್ಲಿ ನೋವು ಇಣುಕ ತೊಡಗಿತು. ಪ್ರೀತಿಯ ಮಡದಿ ದೇವಮ್ಮನನ್ನು ೧೯೧೮ರಲ್ಲಿ ಕಳೆದುಕೊಂಡರು. ಇದ್ದೊಬ್ಬ ಮಗ ತಪ್ಪಯ್ಯನ ಕಣ್ಣುಗಳು ಅಚಾತುರ್ಯ ದಿಂದಾಗಿ ಕುರುಡಾದವು. ಶಾರದಮ್ಮ ಮತ್ತು ತಂಗಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳಲ್ಲಿ ಹಿರಿಯ ಮಗಳು ಶಾರದಮ್ಮನಿಗೆ ವೈಧವ್ಯ ಪ್ರಾಪ್ತವಾಯಿತು. ಆಗ ಪ್ರಾಯಶಃ,

"ಪಟಿರಿಯ ಬೆಂಕಿಯೊಳ್ ಬೆಂದೆನ್, ನೊಂದೆನ್,
ಅಟಿಲ್ಗೆ ತಣ್ಪನ್ ತಾರಾ, ತಾರಾ."

ಎಂದು ನೊಂದು ನುಡಿದಿರಬೇಕು.

ತಕ್ಷಣವೇ ತಲೆ ಕೊಡವಿಕೊಂಡು,

"ಇಂದೇನೊ, ಮುಂದೇನೊ ಮುನ್ನೆ ಆಳ್ ಕಾಣನ್.
ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್."

ಎಂದು ತಮಗೆ ತಾವೇ ಸಮಾಧಾನ ತಂದುಕೊಂಡಿರಲೂ ಬೇಕು.

ಮಾತು ಮಿತ-ಮೃದು, ಮಧುರ! ಜನರೊಡನೆ ವಿಶ್ವಾಸದಿಂದ ಬೆರೆಯು ವುದು ; ಪ್ರವಾಸದಲ್ಲಿ ಕಾಣಲು ಬಂದವರೊಡನೆ ನಗುನಗುತ್ತಾ ಮಾತಾಡು ವುದು ; ಗಂಭೀರವಾದ ನಡೆ ನುಡಿ-ನೋಡಿದರೆ ಸಾಕು, ಎಂಥವರಲ್ಲೂ ಗೌರವ ಮೂಡಿಸುವಂಥ ವ್ಯಕ್ತಿತ್ವ. ಪ್ರೀತಿಯ ಮಾರ್ದವ ನೋಟದಲ್ಲಿ ಶೋಧನೆಯ ತೀಕ್ಷ್ಣತೆ. ರಾಜಠೀವಿಯ ಎತ್ತರದ ನಿಲುವು. ಬಿಳಿಯ ಷರಾಯಿ, ಕಾಲರು ಮುಚ್ಚಿದ ನೀರುಪಾದ ಕೋಟು, ಝಳಪಿಸುವ ಜರತಾರಿ ರುಮಾಲು, ಹೊಳೆ ಯುವ ಬೂಟುಗಳು-'ಶ್ರೀ'ಯವರ ಲೌಕಿಕ ಅಚ್ಚುಕಟ್ಟುತನಕ್ಕೆ ಸಾಕ್ಷಿಯಾಗಿದ್ದವು. ನೋವುಂಡು ಬೆಳೆದರೂ ಹಾಲುಂಡು ಬೆಳೆದಷ್ಟು ತೃಪ್ತಿ! ಮನುಷ್ಯರೆಂದ ಮೇಲೆ ವಿಧಿ ತನ್ನ ಆಟವನ್ನು ಅವರೊಡನೆ ಆಡಿಯೇ ತೀರೀತು. ಆಗ,

"ವಿಧಿವಶದೆ ಕಾಲ್‌ತೊಡರ್ದು ಬಿದ್ದಂಗೆ ಮಱುಗುವೆನ್.
ಇಂದವನ್, ನಾಳೆ ನಾನ್. ಏನ್ ಪಾಡೊ ಆಳ ಬಾೞ್ !"

ಎಂದು ಸ್ವಗತವಾಗಿಯಾದರೂ ತಮ್ಮ ನೋವನ್ನು ಹಳಿದುಕೊಂಡಿರಲೂ ಬಹುದು.

ಕನ್ನಡ ನಾಡಿನಲ್ಲಿ ಹೊಸ ಜೀವನದ ಅರುಣೋದಯವಾಗಬೇಕಾದರೆ ನಾಡಿನ ಶಿಕ್ಷಣ, ಆಡಳಿತ, ವ್ಯವಹಾರ ಎಲ್ಲ ಹಂತಗಳಲ್ಲೂ ಕನ್ನಡ ಭಾಷೆಯ ಬಳಕೆ ಆಗಬೇಕೆಂದು ಆಗ್ರಹಪಡಿಸಿದವರು 'ಶ್ರೀ'.

"ಕನ್ನಡದ ಪರವಾಗಿ, ಕನ್ನಡದ ಮೇಲಿನ ಅಭಿಮಾನದಿಂದ ನಾನು ಒಂದು ಮಾತನ್ನು ಹೇಳಿದ ಪಕ್ಷದಲ್ಲಿ ಅದನ್ನು ಸಂಕುಚಿತ ದೃಷ್ಟಿ ಎಂದು ಯಾರೂ ಹೇಳಬಾರದು. ಯಾಕೆಂದರೆ ಕನ್ನಡ ನಾಡಿಗೆ ಕನ್ನಡವೇ ಗತಿ. 'ಅನ್ಯಥಾ ಶರಣಂ ನಾಸ್ತಿ', ಸಂಸ್ಕೃತವಲ್ಲ, ಇಂಗ್ಲೀಷಲ್ಲ, ಹಿಂದಿಯಲ್ಲ, ಕನ್ನಡ." ಎಂದು ಬಹಿರಂಗವಾಗಿ ಹೇಳಿದರು.

ಕನ್ನಡ ಭಾಷೆ ಬೆಳೆದಿತ್ತು, ನಿಜ. ಆದರೆ ಅದನ್ನು ಹೊಸತನಕ್ಕೆ ಹೊಸ ತೊಡಿಗೆಗೆ ಅಣಿಗೊಳಿಸಬೇಕಾಗಿತ್ತು. ಆಗ,

"ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ
ಎತ್ತುವರು ಯಾರು ? ಎತ್ತುವುದಕ್ಕೆ ನಿಂತರೆ
ತಡೆಯುವವರು ಯಾರು ?"–ಎಂದು ಸವಾಲನ್ನು ಎಸೆದರು ;

ಕನ್ನಡಿಗರನ್ನು ಹುರಿದುಂಬಿಸಿದರು.

ಅಂದು ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ವಿಶ್ವವಿದ್ಯಾನಿಲಯಗಳಲ್ಲಿಯೂ ಮೂಗು ಮುರಿಯುವ ಕಾಲ ; ಕನ್ನಡ ಬದುಕಿಯೂ ಸತ್ತಂತಿದ್ದ ಕಾಲ. ಆಗ ಇಂಗ್ಲಿಷ್ ಭಾಷೆಗೆ ಎಲ್ಲಿಲ್ಲದ ಗೌರವ. ಕನ್ನಡ ಮಾತೃಭಾಷೆಯಾಗಿದ್ದು ಇಂಗ್ಲಿಷ್ ಪ್ರಾಧ್ಯಾಪಕರಾಗಿ 'ಶ್ರೀ'ಯವರು ವಿದೇಶಿ ಆಂಗ್ಲ ಪ್ರಾಧ್ಯಾಪಕರಿಂದಲೇ ಮೆಚ್ಚಿಗೆಯನ್ನು ಗಳಿಸಿದ್ದರು. ಅಂಥವರು ಕನ್ನಡಕ್ಕಾಗಿ ಕೈಯೆತ್ತಿದುದು ಕನ್ನಡಿಗರ ಪಾಲಿನ ಕಲ್ಪತರುವಾಯಿತು.

ಈ ಕನ್ನಡದ ಕಣ್ವರು ಆಗ ಎದುರಿಸಬೇಕಾದ ಸಮಸ್ಯೆಗಳು ಬಹಳ ವಿದ್ದವು. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಬೆಳೆಸಬೇಕಾದರೆ ಖಚಿತವಾದ ಒಂದು ಕ್ರಮವನ್ನು ರೂಪಿಸಬೇಕಾಗಿತ್ತು. ಸುಮಾರು ಹದಿನಾಲ್ಕು ವರ್ಷಗಳ ಕಾಲ ಆಚಾರ್ಯರು ಕನ್ನಡ ಸಾಹಿತ್ಯಕ್ಕೆ ಸ್ಪಷ್ಟವಾದ ಮಾರ್ಗವನ್ನು ಸೂಚಿಸುವ ಸಲುವಾಗಿ ಅನ್ವೇಷಣೆ ನಡೆಸಿದರು. ಆಳವಾಗಿ ಅಧ್ಯಯನ ಮಾಡಿದರು ; ಗಾಢ ವಾಗಿ ಚಿಂತಿಸಿದರು ; ನಿರ್ಮುಕ್ತವಾಗಿ ವಿಮರ್ಶಿಸಿದರು. ಈ ಆಧಾರಗಳಿಂದ ಪ್ರಾಯೋಗಿಕವಾಗಿ ಒಂದು ಮಾರ್ಗವನ್ನು ರೂಪಿಸಿ ಮುಂದಿನ ಪೀಳಿಗೆಗೆ ಮಾರ್ಗಕಾರರಾದರು ; ದಾರಿ ದೀಪವಾದರು.

"ಭಾಷೆ ಬರೀ ಅಂಗಡಿಯಲ್ಲಿ ವ್ಯಾಪಾರ ಮಾಡುವುದಕ್ಕೆ ಬಳಸುವ ಸಾಧನ ವಲ್ಲ. ಬದಲು ಒಂದು ಇಡೀ ಸಮುದಾಯದ ಸಂಸ್ಕಾರಕ್ಕೆ, ಮುನ್ನಡೆಗೆ ಅತ್ಯಗತ್ಯವಾದ ಸಾಧನ" ಎನ್ನುವುದು 'ಶ್ರೀ'ಯವರ ಅನ್ನಿಸಿಕೆ. ಅದಕ್ಕಾಗಿಯೇ "ಭಾಷೆಯ ಶಬ್ದ ಸಂಪತ್ತನ್ನು ಬೆಳೆಸಲು ಬೇಕಾದ ಸೂತ್ರಗಳನ್ನು, ಕೆಲವು ಶಬ್ದ ಗಳನ್ನು ಬಿಡಬೇಕಾದ ಅಗತ್ಯಗಳನ್ನೂ, ಯಾವ ಪುಸ್ತಕಗಳ ವಿಧಿಗಳಿಗೆ ಶರಣಾಗದೆ ಅನುಸರಿಸಬೇಕಾಗಿದೆ" ಎಂದು ಒತ್ತಿ ಹೇಳಿದರು. ಹೊಸ ಸಾಹಿತ್ಯವನ್ನು "ಮತ ಪ್ರಚಾರಕ್ಕಾಗಲಿ, ಪೂರ್ವ ಕಥಾನುವಾದಕ್ಕಾಗಲಿ ಬರೆಯತಕ್ಕದ್ದಲ್ಲ ; ನೂತನ ಜ್ಞಾನಪ್ರಸಾರಕ್ಕಾಗಿ ಪೂರ್ಣಕಲಾನುಭವಕ್ಕಾಗಿ, ಉತ್ತಮ ಜೀವನ ಕಾರ್ಯಾರಂಭ ಪ್ರೇರಣೆಗಾಗಿ ಬರೆಯತಕ್ಕದು" ಎಂದು ಸಾರಿ ಸಾರಿ ಹೇಳಿದರು. ಕಾವ್ಯದಲ್ಲಿ ವಸ್ತು, ರೀತಿ, ಭಾವ, ವರ್ಣನೆ, ಶೈಲಿ, ರೂಪಗಳೆಲ್ಲ ಬದಲಾಗ ಬೇಕೆಂದು ಕಾರಣ ಕೊಟ್ಟು ವಿವರಿಸಿದರು. ವಿನೂತನ ಶೈಲಿಗೆ ಹೆಜ್ಜೆಗುರುತು ಗಳನ್ನೂರಿ ದಾರಿ ಸವೆಸಿದರು.

"ಹಿರಿಯರಿಂದ ಬರುವ ಒಡವೆಗಳಲ್ಲಿ ಭಾಷೆ ಒಂದು ; ಅದು ಚೆನ್ನಾಗಿದ್ದಷ್ಟೂ ಭೂಷಣ"ವೆಂದು, ಭಾಷೆಯನ್ನು ಸೋಸಿದರು ; ಎಲ್ಲರಿಗೂ ಅರ್ಥವಾಗುವಂತೆ ಭಾಷೆಯನ್ನು ಬಳಸಿದರು. ಅದಕ್ಕಾಗಿ 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ,' 'ಕನ್ನಡ ಸಾಹಿತ್ಯ ಚರಿತ್ರೆ' ಮತ್ತು 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಪುಸ್ತಕಗಳನ್ನು ಬರೆದರು. ಅಲ್ಲದೆ 'A Hand Book of Rhetoric' ಎಂಬ ಇಂಗ್ಲೀಷ್ ಕೃತಿಯನ್ನೂ ರಚಿಸಿದರು. ಜೊತೆಗೆ ಸಾಹಿತ್ಯಕ್ಕೆ ಸಂಬಂಧಪಟ್ಟ ಹತ್ತು ಹಲವು ವಿಚಾರಗಳನ್ನೆತ್ತಿಕೊಂಡು ಬರೆದರು.

ನಾಡಿನ ಜನತೆಗೆ ಅವಕಾಶ ಸಿಕ್ಕಾಗಲೆಲ್ಲ ಹೊಸ ವಿಷಯಗಳನ್ನು ತಿಳಿಸಿದರು. ನೂತನ ಬಗೆಯಲ್ಲಿ ಯೋಚಿಸುವಂತೆ ಪ್ರಚೋದಿಸಿದರು. ಪ್ರೇರಣೆ, ಪ್ರಚೋದನೆ ಮತ್ತು ಪ್ರೋತ್ಸಾಹಗಳು ಅವರ ಬತ್ತಳಿಕೆಯಿಂದ ಬಂದು, ಭಾಷೆಯ ಬೆಳವಣಿಗೆಗೆ. ಬಳಸುವಿಕೆಗೆ ನೆರವಾದ ಆಯುಧಗಳಾದವು.

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು ;

..................................

ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು ಕಣ್ಣು,

ಎಂದು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡನ್ನೂ ಸಮತೂಗಿಸಿಕೊಂಡು ನಡೆದರು.

'ಶ್ರೀ'ಯವರು ಬರೆದ 'ಗದಾಯುದ್ಧ ನಾಟಕಂ', ಅಶ್ವತ್ಥಾಮನ್' ಮತ್ತು 'ಪಾರಸಿಕರು' ನಾಟಕಗಳು ಹೊಸತನದ ಅಂಗಿತೊಟ್ಟರೂ ಉತ್ತಮವಾದ ಕೃತಿಗಳಾದವು. 'ಅಶ್ವತ್ಥಾಮನ್' ನಾಟಕ ಅನೇಕ ವಿಶಿಷ್ಟ ಗುಣಗಳಿಂದ ಅತ್ಯುತ್ತಮ ಕೃತಿಯೆಂದರೆ ತಪ್ಪಾಗಲಾರದು. ರಂಗಭೂಮಿಯ ಮೇಲೆ ಚಿರಂಜೀವಿಯನ್ನು ಮರ್ತ್ಯನನ್ನಾಗಿ ಮಾಡಿ, ಶ್ರೀ ಕೃಷ್ಣನನ್ನು ಒಬ್ಬ ಸಾಮಾನ್ಯ ಮನುಷ್ಯನನ್ನಾಗಿಸಿದರೆಂಬ ಅಪವಾದಕ್ಕೆ ಗುರಿಯಾದರು. 'ಆಳೌಬ್ರಿಟಾನಿಯಾ' ಅನುವಾದಿಸಿದರೆಂದು 'ಶ್ರೀ'ಯವರನ್ನು ಇಂಗ್ಲೆಂಡಿನ ಭಕ್ತರೆಂದರು ; ಅವರ ರಾಜಭಕ್ತಿಯನ್ನು ಲೇವಡಿ ಮಾಡಿದರು. ಇದಾವುದಕ್ಕೂ ಅವರು ಹೆದರಲಿಲ್ಲ, ನಿಂತ ನೆಲ ಬದಲಿಸಲಿಲ್ಲ.

"ನಾಡಾಡಿಗಳ ಬಾಯ ಬಳಕೆಯಲಿ ನಾಟದೆಯೆ
ತನ್ನಾತ್ಮ ಸಾಕ್ಷಿಗೆ ಕೋಟೆ" ಕಟ್ಟಿದರು
"ಹೊಗಳುವರು ನೆರೆದುಂಡು ತೇಗದವನಿದ್ದಾಗ,
ಬಿದ್ದಾಗ ಬಗಳುವರು ಜರೆದುಕೊಳದವನು"

ಎಂದು ಬರೆದು ಸಮಾಧಾನ ತಂದುಕೊಂಡರು.

'ಶ್ರೀ'ಯವರು ಬರೆದುದು ಬಹಳ ಕಡಮೆ, ಹೌದು. ಆದರೆ ಅದಕ್ಕೆ ಕಾರಣಗಳು ಹಲವಾರು. ಕಾಲೇಜಿನ ಉದ್ಯೋಗ, ವಿರಾಮವಿಲ್ಲದ ಬದುಕು, ಕನ್ನಡ ಕೆಲಸಕ್ಕಾಗಿ ಊರೂರು ತಿರುಗುತ್ತಿದ್ದುದು ; ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರು ಆರಿಸಿಕೊಂಡ ವಸ್ತುವನ್ನು ಹೆಚ್ಚು ಕಾಲ ಎದೆಯಾಳದಲ್ಲಿ ಕಾವು ಕೂರಿಸಿ ಕೊಳ್ಳುತ್ತಿದ್ದ ಪ್ರವೃತ್ತಿ, ಬರೆದದ್ದನ್ನು ಮತ್ತೆ ಮತ್ತೆ ತಿದ್ದಿ ಪುಟಕಿಕ್ಕಿ ಬಂಗಾರ ಮಾಡುತ್ತಿದ್ದ ರೀತಿ–ಇವೆಲ್ಲಾ ಕಡಿಮೆ ಗಾತ್ರದ, ಆದರೆ ಗುಣಮಟ್ಟದ ಕೃತಿಗಳಾದವು.

ಹದಿನೈದನೆಯ ಶತಮಾನದಲ್ಲಿ ಸತ್ವಪೂರ್ಣವಾಗಿ ಬೆಳೆದ ಇಂಗ್ಲಿಷ್ ಸಾಹಿತ್ಯರಾಶಿಯ ಬೆಳೆಯನ್ನು ಕನ್ನಡದ ಕಣಜಕ್ಕೆ ತುಂಬಬೇಕೆಂದು 'ಶ್ರೀ' ಯವರು ಇಂಗ್ಲಿಷಿನ ಕವನಗಳನ್ನು ಅನುವಾದಿಸಿದರು. ಭಾವ ಪ್ರಪಂಚ ಪರಿಚಯದ ತೊರೆ ಹರಿಸಿದರು, ಜೊತೆಗೆ ಹೊಸ ರೀತಿಯ ಸಾಧ್ಯತೆಗಳನ್ನು ತೋರಿಸಿಕೊಟ್ಟರು. ಇವುಗಳನ್ನು ೧೯೨೬ ರಲ್ಲಿ "ಇಂಗ್ಲಿಷ್ ಗೀತೆಗಳು" ಎಂಬ ಹೆಸರಿನಿಂದ ಪ್ರಕಟಿಸಿದರು. ಇದು ಕನ್ನಡದ ಆಧುನಿಕ ಭಾವಗೀತೆಗಳಿಗೆ ನಾಂದಿಯಾಯಿತು. ಬರೇ ಪೌರಾಣಿಕ ವ್ಯಕ್ತಿಗಳ ಹಿಂದೆ ಸುತ್ತಾಡಿದ ಕನ್ನಡ ಕಾವ್ಯ, 'ಕಾಳಗದ ಪದ'ವಾದವು ; 'ಕಾರಿ ಹೆಗ್ಗಡೆಯ ಮಗಳ' ದುರಂತವಾದವು; 'ಮುದಿಯ ರಾಮಗೌಡ'ನ ಬದುಕಾದವು; ಬಾನೆತ್ತರಕ್ಕೆ ಹಾರಬಲ್ಲ 'ಬಾನಾಡಿ'ಯ ಹಾಡಾದವು ; 'ಮಾದಮಾದಿ'ಯರ ಪ್ರೇಮವಾದವು ; 'ಸುಂದರಿ ಕಮಲೆ'ಯ ಸೆಳೆತವಾದವು. ಈ ಗೀತೆಗಳನ್ನು ಓದಿದರೆ ಸಾಕು, ಇಲ್ಲಿಯ ಭಾವ, ಬಳಸಿರುವ ಭಾಷೆ ಮತ್ತು ಕನ್ನಡ ಕಾವ್ಯಕ್ಕೆ ಹೊಸ ದಾರಿ ತೋರಿರುವ ರೀತಿ ನಮಗೆ ಅಚ್ಚರಿಯನ್ನುಂಟು ಮಾಡುತ್ತದೆ. ಶ್ರೀ ಸಾಮಾನ್ಯನ ಎಲ್ಲ ಕನಸುಗಳು, ಹಂಬಲಗಳು, ನೋವು–ನಲಿವುಗಳು, ಆಸೆ–ನಿರಾಸೆಗಳು ಭಾಷೆಯಲ್ಲಿ ಮೂಡಿ ಮೂರ್ತಿಯಾಗುವುದನ್ನು ಇಲ್ಲಿ ನೋಡಬೇಕು.

"ಹೊಂಗನಸುಗಳು" 'ಶ್ರೀ'ಯವರು ಬದುಕಿದ್ದಾಗ ಪ್ರಕಟವಾದ ಕೊನೆಯ ಕೃತಿ. ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಹದಿನಾಲ್ಕು ಕವನಗಳ ಸಂಕಲನ ವಿದು. ಇಲ್ಲಿ ಅವರು ಮಾಡಿದ ಭಾಷಾ ಪ್ರಯೋಗಗಳು ನಮ್ಮನ್ನು ದಂಗು ಬಡಿಸುತ್ತವೆ. ಮಾತ್ರೆ–ಗಣ–ಲಯ–ಪ್ರಾಸಗಳ ಪ್ರಯೋಗಶಾಲೆಯೇ ಇದಾಗಿದೆ.

ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಅವರು 'ಶ್ರೀ ಕೃಷ್ಣರಾಜ ರಜತೋತ್ಸವ ಪ್ರಗಾಥ'ವನ್ನು ಬರೆದರು.

"ಕಾಯಿ, ತಾಯಿ, ಕೃಪೆಯ ತೋರಿ
ನಮ್ಮ ಕೃಷ್ಣನ ;
ಬೆಳ್ಳಿ ಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ"

ಎಂದು ಪ್ರಾರಂಭಿಸಿ,

"ಕಾಯಿ, ತಾಯಿ, ಗೌರಿದೇವಿ ಕೃಷ್ಣರಾಯನ !
ಬೆಳ್ಳಿ ಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ
ಕನ್ನಡಿಗರ ವಯಿರ ಮುಡಿಯ ರಾಯ ಕೃಷ್ಣನ !"

ಎಂದು ಮುಗಿಸುತ್ತಾರೆ. ಶ್ರೀಮನ್ ಮಹಾರಾಜರು ದಿವಂಗತರಾದಾಗ 'ಬಾನ್‌ಕೊಂಡ ಕೃಷ್ಣನ್' ಎಂಬ ಶೋಕ ಗೀತೆಯನ್ನು ರಚಿಸಿದರು.

"ಗ್ರೀಕ್ ಮಹಾಕವಿ ಸಾಫೋಕ್ಲೀಸಿನ 'ಏಜಾಕ್ಸ್' ಎಂಬ ರುದ್ರನಾಟಕವನ್ನು ಆಶ್ರಯಿಸಿ, ಮಹಾಭಾರತದ ಸಾಪ್ತಿಕ ಪರ್ವದ ಕಥೆಯನ್ನು ಅದರೊಡನೆ ಹೊಂದಿಸಿಕೊಂಡು 'ಅಶ್ವತ್ಥಾಮನ್' ನಾಟಕವನ್ನು ರಚಿಸಲಾಗಿದೆ"–ಎಂದು 'ಶ್ರೀ'ಯವರೇ ಹೇಳುತ್ತಾರೆ. ದೇವಮಾನವ ಸಂಬಂಧ, ಧರ್ಮದ ಪ್ರಭಾವ, ಮನುಷ್ಯನ ಇತಿಮಿತಿಗಳನ್ನು ಈ ನಾಟಕದಲ್ಲಿ ಕಾಣಬಹುದು. ಬಾಳದರ್ಶನ, ನಾಟಕಕಾರನ ಆಳವಾದ ಚಿಂತನೆ ಇಲ್ಲಿ ಬೆನ್ನುಮೂಳೆ, ಆಚಾರ್ಯ 'ಶ್ರೀ'ಯವರ ಆಚಾರ್ಯ ಕೃತಿ, ಪ್ರಪ್ರಥಮ ರುದ್ರ ಗಂಭೀರ ದುರಂತ ನಾಟಕ 'ಅಶ್ವತ್ಥಾಮನ್'.

ರನ್ನ ಕವಿಯ ಚಂಪೂಕಾವ್ಯ 'ಸಾಹಸ ಭೀಮ ವಿಜಯಂ' ದಿಂದ ಪ್ರೇರಿತರಾಗಿ 'ಶ್ರೀ'ಯವರು "ಗದಾಯುದ್ಧ ನಾಟಕಂ" ಬರೆದರು. ಅವರ ಮತ್ತೊಂದು ನಾಟಕವಾದ 'ಪಾರಸಿಕರು' ಗ್ರೀಕ್ ರುದ್ರನಾಟಕದ ಪರಂಪರೆಯಿಂ ನಿರ್ಮಾತೃವಾದ ಈಸ್ಕಿಲಸ್‌ನ 'ಪರ್ಸಿ' ನಾಟಕದ ಕನ್ನಡಾನುವಾದ. ಕ್ರಿ.ಪೂ. ೪೮೦ ರಲ್ಲಿ ಪಾರಸಿಕರು ತಮ್ಮ ದೊರೆ ಕ್ಷಯಾರ್ಷನ ನೇತೃತ್ವದಲ್ಲಿ ಗ್ರೀಕರೊಡನೆ ಯುದ್ಧ ಮಾಡಿದ ಕಥೆ ಈ ನಾಟಕದ ವಸ್ತು.

ಕನ್ನಡದ ಸ್ಥಿತಿ ಬಹಳ ಚಿಂತಾಜನಕವಾಗಿದ್ದ ಕಾಲದಲ್ಲಿ 'ಶ್ರೀ'ಯವರು ತಮ್ಮ ತನುಮನಧನಗಳನ್ನು ಧಾರೆ ಎರೆದುಕೊಟ್ಟರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗಾಗಿ ದುಡಿದರು. ಪರಿಷತ್ತಿನ ಧ್ಯೇಯಧೋರಣೆಗಳನ್ನು ನಿರೂಪಿಸಿದರು. ಅದರ ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ (೧೯೩೮) ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಕಂಡು ಆರು ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟರು. ಈ ಹಣದಿಂದ ಪರಿಷತ್ತು ತನ್ನ ಸ್ವಂತ ಅಚ್ಚು ಕೂಟವನ್ನು ಹೊಂದಿ, 'ಬಿ.ಎಂ ಶ್ರೀ. ಅಚ್ಚುಕೂಟ'ವೆಂದು ಅವರ ಹೆಸರನ್ನೇ ಹೊತ್ತು ನಿಂತಿತು. ಕನ್ನಡಿಗರಿಗೆ ಒಳ್ಳೆಯ ಪುಸ್ತಕ ಪ್ರಕಟಣೆ, ಸಾಹಿತ್ಯ ಪರೀಕ್ಷೆಗಳು, ಮಹಿಳೆಯರಿಗೆ ಪರಿಷತ್ತಿನಲ್ಲಿ ಪ್ರಾಶಸ್ತ್ಯ ಇವೆಲ್ಲವೂ 'ಶ್ರೀ'ಯವರಿಂದ ಪ್ರಾರಂಭವಾದವು.

ಇಂಗ್ಲಿಷ್ ನಾಟಕಕಾರ ಷೇಕ್ಸ್‌ಪಿಯರ್, ಕವಿ ವರ್ಡ್ಸ್‌ವರ್ತ್, ವಿಮರ್ಶಕ ಅರ್ನಾಲ್ಡ್ 'ಶ್ರೀ'ಯವರಿಗೆ ಪ್ರಿಯರು ; ಆದರೆ ಕವಿ ಬ್ರೌನಿಂಗ್ ಪರಮಪ್ರಿಯ. ಅವನ ಕವಿತೆಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಎಂ.ಎ. ಪರೀಕ್ಷೆಗಾಗಿ ಅವನ 'ಪಿಪ್ಪಾ ಪಾಪಸ್' ಎಂಬ ಕವಿತಾ ನಾಟಕದ ಬಗ್ಗೆ ಒಂದು ಪ್ರೌಢ ಪ್ರಬಂಧವನ್ನು ಬರೆದಿದ್ದರು. ಪಿಪ್ಪಾ ರೇಶಿಮೆ ಕಾರ್ಖಾನೆಯ ಕೂಲಿಕಾರಳು, ಕುರುಡು ಹುಡುಗಿ. ಆದರೆ ದೇವರಲ್ಲಿ ನಿಚ್ಚಳ ಭಕ್ತಿಯುಳ್ಳವಳು. ಅವಳ ಹಾಡು ಇಂಗ್ಲಿಷ್ ಸಾಹಿತ್ಯದಲ್ಲಿ ಅಳಿಸಲಾರದ ಸ್ಥಾನ ಪಡೆದಿದೆ.

"ಹೇಗೆ ಬಂದೆನು ನಾನು, ಹೇಗೆ ಹೋಗುವೆನು !
ಹಿಂದೆ ವಿಜಯೋತ್ಸವದಿ ಸತ್ತು ಬಿದ್ದಿಹರು !
ಲೋಕವೇ ಫಲಕೊಡಲು, ನನ್ನ ಹಂಗೇನು ?"

ಎಂದು ೫-೧-೧೯೪೬ ರಂದು ಧಾರವಾಡದಲ್ಲಿ,

BmS
928.K

"ಸರ್ವ ಜೀವಂಗಳುಂ ಮುಕ್ತಿಯುಂ ಕಾಣ್ಗೆ ;
ದೇವರೊಳ್ ಪಗೆವವರ ಕಾಳಗಂ ಮಾಳ್ಗೆ ;
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ
...................................................
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ"
ಎಂದು ಕೊನೆಯುಸಿರೆಳೆದರು.

'ಹುಡಿಯೊಳಳಿಯದ ಹೆಸರ ಬಿಟ್ಟಿರುವೆ' ಬಂಧು
ನಿನಗೆ ಮುಡಿ ಬಾಗುವೆವು ಕನ್ನಡಿಗರಿಂದು.

ಏರಿಸಿ, ಹಾರಿಸಿ, ಕನ್ನಡದ ಬಾವುಟ-'ಶ್ರೀ'

ಹಾರ್ದಿಕ ಶುಭಾಶಯಗಳೊಂದಿಗೆ :

# ಸಪ್ತಸ್ವರ ಎಂಟರ್‌ಪ್ರೈಸಸ್

ಬಿ. ವಿ. ಕೆ. ಅಯ್ಯಂಗಾರ್ ರಸ್ತೆ

ಬೆಂಗಳೂರು-೨

# ಸಿಸನ್ಸ್ ಎಲೆಕ್ಟ್ರಾನಿಕ್ಸ್ (ಪ್ರೈ) ಅವರ

'ದೇವಾರಾಧನೆ'

ರಚನೆ : ಎಚ್. ಎಲ್. ಶೇಷಚಂದ್ರ

ಗಾಯನ : ಸೌಂಡ್ ಆಫ್ ಮ್ಯೂಸಿಕ್‌ನ
ಗುರು, ಮಂಜುಳಾ ಮುರಳೀಧರ್

ಭಕ್ತಿ ಗೀತೆಗಳ ಧ್ವನಿಸುರುಳಿ ನಮ್ಮ ಇತ್ತೀಚಿನ ಬಿಡುಗಡೆ

ಕರ್ನಾಟಕ ರಾಜ್ಯಕ್ಕೆ ಎಚ್. ಎಂ. ವಿ, ಸಿಸನ್ಸ್ ಮತ್ತು ಇಕೋ ಕಂಪೆನಿಗಳ ಧ್ವನಿಮುದ್ರಿಕೆ ಹಾಗೂ ಧ್ವನಿಸುರುಳಿಗಳಿಗೆ ನಾವು ಅಧಿಕೃತ ಹಂಚಿಕೆದಾದರರು.